# ಅಧ್ಯಯನ – 4 Study IV

# ಪಾಪ ವಿಮೋಚನೆಯ ಮಹಾಯಾಜಕ

## The High Priest of the Atonement

### ನಿಷ್ಕಳಂಕನು

### The Undefiled One

**ಭಿನ್ನಾಭಿಪ್ರಾಯವಿರುವಂತೆ ಕಾಣಬರುವ ವೇದವಚನಗಳ ಹೊಂದಾಣಿಕೆ – ಮರಿಯಳ ಪರಿಶುದ್ಧವಾದ ಗರ್ಭಧಾರಣೆ ಎಂಬ ರೋಮನ್ ಕೆಥೋಲಿಕರ ಸಿದ್ಧಾಂತವನ್ನು ಬೆಂಬಲಿಸಲಾಗದು – ಕ್ರಿಸ್ತನ ಜನನವು ಪಾಪಿಗಳಿಗಿಂತ ವಿಭಿನ್ನವಾದುದು ಎಂಬುದು ದೈವಿಕ ವ್ಯವಸ್ಥೆಗೆ ಅಗತ್ಯವಾಗಿತ್ತು – ಇಲ್ಲವಾದಲ್ಲಿ ಈಡುಬಲಿಯ ಸಾಧ್ಯತೆ ಇದ್ದಿಲ್ಲ – ಜೀವ ಮತ್ತು ಜೀವ ದ್ರವ್ಯ (ಪ್ರೊಟೋಪ್ಲಾಸಮ್) ಇವುಗಳ ಪುನಃ ಕೂಡಿಸುವಿಕೆಯ ಇತ್ತೀಚಿನ ವೈಜ್ಞಾನಿಕ ವ್ಯವಕಲನ – ವಾಕ್ಯವು ಮಾಂಸಧಾರಿಯಾದುದು – ಸ್ತ್ರೀಯರಲ್ಲಿ ಜನಿಸಿದ್ದ ನಿಷ್ಕಳಂಕನು – ಅಸಂಪೂರ್ಣಳಾದ ತಾಯಿಯೊಬ್ಬಳು ನಿಷ್ಕಳಂಕವಾದವನನ್ನು ಹೆರುವುದಾದರೂ ಹೇಗೆ? ಇದೇ ತತ್ವವು ಇತರ ದೈವಿಕ ಯೋಜನೆಗಳಲ್ಲಿಯೂ ಕಾರ್ಯವೆಸಗುತ್ತಿವೆ ಎಂಬುದಕ್ಕೆ ಪರಿಶುದ್ಧ ಗ್ರಂಥಗಳಲ್ಲಿ ಪುರಾವೆಗಳಿವೆ.**

**"ಅಶುದ್ಧದಿಂದ ಶುದ್ಧವೂ ಉಂಟಾದೀತೇ? ಎಂದಿಗೂ ಇಲ್ಲ" (ಯೋಬ 14:4)**

**"ಪಾಪಗಳನ್ನು ಹೋಗಲಾಡಿಸುವುದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬುದು ನಿಮಗೆ ಗೊತ್ತಾಗಿದೆ. ಆತನಲ್ಲಿ ಪಾಪವಿಲ್ಲ", "ಈತನು ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ, ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು" – 1 ಯೋಹಾನ 3:5, ಇಬ್ರಿಯ 7:26.**

ಇಲ್ಲಿ ಘರ್ಷಣೆಯಿಂದೊಡಗೂಡಿದ ದೇವರ ವಾಕ್ಯದ ಹೇಳಿಕೆಗಳಿವೆ. ಮೊದಲನೆಯದು ನಮ್ಮ ಅನುಭವಕ್ಕೆ ಸಾಮರಸ್ಯವುಳ್ಳದ್ದಾಗಿದೆ. ಅದೇನೆಂದರೆ, ಆದಾಮನ ಸಂತಾನದವರೆಲ್ಲರೂ ವಿಷದ ಬುಗ್ಗೆಯಲ್ಲಿ ಉಕ್ಕಿದ ಪಾಪವೆಂಬ ನಂಜಿಗೆ ತುತ್ತಾಗಿದ್ದಾರೆ. ಎರಡನೆಯದು ಸ್ಪಷ್ಟವಾಗಿ ತಿಳಿಸುವುದೇನೆಂದರೆ, ನಮ್ಮ ಕರ್ತನು ಒಬ್ಬ ಮನುಷ್ಯನಾಗಿ, ಬೇರೆ ಮನುಷ್ಯರಿಗಿಂತ ಭಿನ್ನವಾಗಿದ್ದಾನೆ. ನಿರ್ದೋಷಿಯೂ, ನಿಷ್ಕಳಂಕನೂ, ಆಗಿದ್ದಾನೆ. ಆದುದರಿಂದ ಪಾಪನಿವೃತ್ತಿಯ ಬಗ್ಗೆ ದೇವರ ವಾಕ್ಯದಲ್ಲಿ ಕೊಡಲ್ಪಟ್ಟಿರುವ ಸಮಗ್ರವಾದ ವಿಚಾರಸರಣಿಯು ನಮ್ಮ ವಿಮೋಚಕನು ನಿರ್ದೋಷಿಯಾದ ಮನುಷ್ಯನಾಗಿರ ತಕ್ಕದೆಂದೂ, ನಮ್ಮ ಜನಾಂಗದವನಾದರೂ ಅದರಿಂದ ಪ್ರತ್ಯೇಕವಾದವನಾಗಿರಬೇಕೆಂದೂ ಒತ್ತಿ ಹೇಳುತ್ತದೆ – ಇದು ಕರ್ತನ ಆಲೋಚನೆಯುಳ್ಳ ವ್ಯಕ್ತಿಗಳಿಗೆ ಬಹು ಮುಖ್ಯವಾದ ಸಂಗತಿಯಾಗುತ್ತದೆ. ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಕರಣದಲ್ಲಿ ಮಾನವನ ಎಲ್ಲಾ ಅನುಭವಗಳ ಪ್ರಕಾರ ಮತ್ತು ಯೋಬನ ಸಾಕ್ಷಿಯಂತೆ ಮಾನವರಿಗೆ ಅಸಾಧ್ಯವಾದುದನ್ನು ದೇವರು ಹೇಗೆ ನೆರವೇರಿಸಬಲ್ಲನು? ಈ ದೈವಿಕ ವ್ಯವಸ್ಥೆಯು ಯಾವ ರೀತಿಯಲ್ಲಿ ಈ ಅಪೇಕ್ಷಿತ ಆದರೂ ಅಸಾಧ್ಯವೆಂದು ಕಂಡು ಬರುವ ಸಂಗತಿಯನ್ನು ಅಂದರೆ ಮಾನವ ಜನಾಂಗದಲ್ಲಿ ಹುಟ್ಟಿದರೂ ನಿಷ್ಕಳಂಕನೂ, ನಿರ್ದೋಷಿಯೂ ಆಗಿ ಈಡುಬಲಿಗೆ ಯೋಗ್ಯವಾಗುವಂತೆ – ತನ್ನ ಜನಾಂಗದ ಶಾಪಕ್ಕೆ ಕಾರಣನಾದ ಮೊದಲನೆಯ ಪರಿಪೂರ್ಣ ಮನುಷ್ಯನಿಗೆ ತಕ್ಕ ಬೆಲೆಯನ್ನು ತೆರುವಂತೆ ಈ ಕಾರ್ಯವು ಹೇಗೆ ನೆರವೇರಿತು ಎಂಬುದಕ್ಕೆ ಸಮೃದ್ಧ ಪುರಾವೆಗಳನ್ನು ನೀಡುವುದು ನಮ್ಮ ಈ ಅಧ್ಯಾಯದ ಸಂತೋಷಕರ ಕಾರ್ಯವಾಗಿದೆ.

ದೇವರ ಸತ್ಯವಾದ ಶಿಷ್ಯತ್ವದ ನಂಬಿಕೆಗಾಗಲೀ ಅಥವಾ ರಕ್ಷಣೆಗಾಗಲೀ ಈ ಶಿಷ್ಟಾಚಾರದ ತಿಳುವಳಿಕೆಯ ಅಗತ್ಯವಿಲ್ಲ. ಆದರೆ, ಇಂದಿನ ದಿನದ ಸಮಂಜಸವೂ, ಅಸಮಂಜಸವೂ ಆದ ನಾಶಕರ ಟೀಕೆಯ ಬೆಳಕಿನಲ್ಲಿ ಪಾಪನಿವೃತ್ತಿಯೊಂದಿಗೆ ನಿಕಟವಾಗಿ ಗುರುತಿಸಿಕೊಂಡಿರುವ ಈ ಸತ್ಯವು, ನಿಜವಾದ ಕ್ರೈಸ್ತತ್ವದ ಕೇಂದ್ರವಾಗಿದ್ದು ಈಡುಬಲಿಯ ಬಗ್ಗೆ ದೇವಜನರ ವಿಶ್ವಾಸಕ್ಕೆ ಪ್ರತಿಕೂಲವಾದ ಪ್ರಸಂಗ ಪೀಠದಿಂದ, ಪತ್ರಿಕೆಗಳಿಂದ, ದೇವಾಲಯದಲ್ಲಿ ಬೋಧಕನು ಕೂಡುವ ಸ್ಥಳದಿಂದ ಉಂಟಾಗುತ್ತಿರುವ ವಿರೋಧಿಯ ಎಲ್ಲಾ ಹಲ್ಲೆಗಳನ್ನೂ ಎದುರಿಸಿ ನಿಲ್ಲುವ ಉದ್ದೇಶದಿಂದ ಇದನ್ನು ಬಲವಾಗಿ ಅವಲಂಬಿಸ ಬೇಕಾಗುತ್ತದೆ. ತಮ್ಮ ಕರ್ತನ ನಿಷ್ಕಳಂಕತೆಯ ಬಗ್ಗೆ ದೇವರ ವಾಕ್ಯದ ಹೇಳಿಕೆಯು ಶತಮಾನಗಳವರೆಗೆ ಆತನ ಭಕ್ತಜನರಿಗೆ ಸಾಕು. ಇದಕ್ಕಾಗಿ ದೇವರಿಗೆ ಸ್ತೋತ್ರ! ಆದರೆ ಮನೆವಾರ್ತೆಯವರಿಗೆ "ಹೊತ್ತು ಹೊತ್ತಿಗೆ ಬೇಕಾದ

ಆಹಾರ"ದಂತೆ ವೈಜ್ಞಾನಿಕವಾದ, ವೇದಾಂತವಾದ ದೃಢಪಡಿಸುವಿಕೆಗಳು ದೇವರ ವಾಕ್ಯದಲ್ಲಿ ಹಕ್ಕಿನಿಂದ ಹೇಳಿಕೊಂಡಿರುವ ಎಲ್ಲಾ ಸಾಧ್ಯತೆಗಳ ಬಗ್ಗೆ - "ಪ್ರಕೃತಿಯ ನಿಯಮದೊಂದಿಗೆ (Laws of Nature)"ಯೊಂದಿಗೆ ಸಾಮರಸ್ಯವಾಗಿ ಬರುತ್ತಲಿವೆ.

ರೋಮನ್ ಕೆಥೋಲಿಕ್ ಸಭೆಯು ಮರಿಯಳ "ದಿ ಇವಮ್ಯಾಕುಲೇಟ್ ಕಾನ್ಸೆಪ್ಷನ್" (ನಿಷ್ಕಳಂಕವಾದ ಗರ್ಭಧಾರಣೆ) ಎಂಬ ತಮ್ಮ ಸಿದ್ಧಾಂತದ ಮೂಲಕ ಕರ್ತನ ತಾಯಿಯಾದ ಮರಿಯಳ ಮೇಲೆ ಆಕೆಯು ನಿಷ್ಕಳಂಕಳೂ, ನಿರ್ಮಲಳೂ, ನಿರ್ದೋಷಿಯೂ ಆಗಿದ್ದಳೆಂಬ ನಂಬಿಕೆಯನ್ನುಂಟುಮಾಡುವ ಪ್ರಯತ್ನ ಮಾಡುತ್ತಿದೆ ಮತ್ತು ಈ ರೀತಿಯಲ್ಲಿ ಅದು ಯೇಸುಕ್ರಿಸ್ತನು ನಿರ್ಮಲವಾಗಿ ಜನಿಸಿದನು ಹಾಗೂ ಆತನು ಪಾಪಿಗಳಿಂದ ಪ್ರತ್ಯೇಕಿಸಲ್ಪಟ್ಟವನು ಎಂದು ರುಜುವಾತು ಪಡಿಸಲು ಬಯಸುತ್ತದೆ. ಆದರೆ, ಇದು ನಮ್ಮ ಸಮರ್ಥನೆಯಲ್ಲ. ಆದಾಮನ ಸಂತತಿಯ ಇತರ ಸದಸ್ಯರ ಅರ್ಥದಲ್ಲಿಯೇ ನಮ್ಮ ಕರ್ತನ ತಾಯಿಯು ಸಹಾ ಅದರ ಸದಸ್ಯಳು ಎಂಬುದನ್ನು ನಾವು ಒಪ್ಪುತ್ತೇವೆ. - ಆಕೆಯ ಜೀವಿತವು ಆದಾಮನ ಸಂತಾನದಿಂದ ಬಂದದ್ದು, ಹೀಗಾಗಿ ಆಕೆಯು ಸಹಾ ಮಾನವ ಬಲಹೀನತೆಗಳನ್ನು ಮತ್ತು ದೋಷಗಳನ್ನು ವಂಶಪಾರಂಪರ್ಯವಾಗಿ ಹೊಂದಿದ್ದವಳು ಮತ್ತು ಯಾವ ತಡೆಯೂ ಇಲ್ಲದೆ ಆಕೆ ಇತರರಂತೆ ಮರಣ ಶಿಕ್ಷೆಗೆ ಒಳಗಾದವಳು. ಆದರೆ ಮನುಷ್ಯನಾದ ಯೇಸುವು ಇವುಗಳೆಲ್ಲವುಗಳಿಗೂ ಹೊರತಾಗಿದ್ದಾನೆ - ಆತನೊಬ್ಬನು ಮಾತ್ರವೇ ಈ ರೀತಿಯಾಗಿ ಹೊರತಾಗಿರುವವನು ಎಂಬುದನ್ನು ನಾವು ಸಮರ್ಥಿಸಿ ಹೇಳುತ್ತೇವೆ.

ಮಾನವರ ಮಕ್ಕಳಿಗೆ ದೇವರ ದೈವಾಯುಕ್ತವಾದ ಪಾಲನೆಯು ಆಗಿಂದಾಗ್ಗೆ ಪ್ರಕೃತಿಗೆ ಅಪವಾದಾತ್ಮಕವಾಗಿ ನೆರವೇರುವುದೆಂಬುದನ್ನು ನಾವು ಮರೆಯದಿರುವುದು ಒಳ್ಳೆಯದು. ಉದಾಹರಣೆಗಾಗಿ, ಶಾಖವು ಹಿಗ್ಗಿಸುತ್ತದೆ ಆದರೆ, ಶೀತಲೀಕರಣವು ಕುಗ್ಗಿಸುತ್ತದೆವೆಂಬುದು ಪ್ರಕೃತಿಯ ನಿಯಮ. ಆದರೆ, ನೀರು ಈ ಸಾಮಾನ್ಯ ನಿಯಮಕ್ಕೆ ಹೊರತಾಗಿರುವುದು ಮಾನವಜಾತಿಗೆ ಎಷ್ಟೋ ಅದೃಷ್ಟಕರ! ನೀರು ಸವಾನ್ಯ ನಿಯುವುಕ್ಕೆ ವಿರುದ್ಧವಾಗಿ ಶೀತಲೀಕರಿಸಿದಾಗ ಹಿಗ್ಗಿಕೊಳ್ಳುತ್ತದೆ. ಅದು ಪ್ರಕೃತಿಯ ಸಾಂಪ್ರದಾಯಿಕ ನಿಯಮದಂತೆ ಕುಗ್ಗಿಕೊಂಡರೆ ಆಗ ಉಂಟಾಗುವ ಶೀತಲಗಡ್ಡೆ (ಮಂಜುಗಡ್ಡೆ)ಯನ್ನು ಶೀತಲೀಕರಿಸದ ನೀರಿಗಿಂತ ಭಾರವನ್ನಾಗಿ ಮಾಡಿ ಅವುಗಳು ನದಿಯ ಕೆಳಭಾಗಕ್ಕೆ ಹೋಗುವಂತೆ ಮಾಡುತ್ತಿತ್ತು. ಇದರ ಪರಿಣಾಮವಾಗಿ ನಮ್ಮ ನದಿಗಳು ಘಟ್ಟಿಯಾದ ಮಂಜುಗಡ್ಡೆಗಳಾಗಿ ಬಿಡುತ್ತಿದ್ದವು ಮತ್ತು ಇವನ್ನು ಬೇಸಿಗೆಯ ಶಾಖವೂ ಕರಗಿಸಲು ಸಾಧ್ಯವಿದ್ದಿಲ್ಲ. ಖನಿಜ ವಸ್ತುಗಳಲ್ಲಿ ಅಂಜನಕಲ್ಲು (Antimony) ಸಹಾ ಈ ನಿಯಮಕ್ಕೆ ಹೊರತಾಗಿದೆ. ಇಲ್ಲವಾದಲ್ಲಿ, ನಾವು ಕುಗ್ಗುವ ಮತ್ತು ಶಾಖಕ್ಕೆ ಹಿಗ್ಗುವ ಖನಿಜಗಳ ಮಿಶ್ರಣದಿಂದ ತಯಾರಿಸಲ್ಪಟ್ಟ ನಮ್ಮ ಮುದ್ರಣ ಟೈಪ್‌ಗಳ ಸ್ಪಷ್ಟವಾದ ಅಂಚನ್ನು ಹೊಂದಿಕೊಳ್ಳಲು ಸಾಧ್ಯವಿದ್ದಿಲ್ಲ. ಈ ರೀತಿಯಲ್ಲಿ ನಮ್ಮ ಜನಾಂಗದಲ್ಲಿ ಪಾಪದ ಅಪವಿತ್ರತೆ ಹೊರತಾದ ಒಂದು ಸಂಗತಿಯೆಂದರೆ ಅದರ ಒಂದೇ ನಿರೀಕ್ಷೆಯು - ಅಂದರೆ ಈಡುಬಲಿ, ದೇವರ ಅನುಗ್ರಹದಿಂದ ಅದರ ರಕ್ಷಣೆ. ಈ ಆಲೋಚನೆಗಳೊಂದಿಗೆ ನಾವು ಯಾವ ರೀತಿಯಲ್ಲಿ ವಾಕ್ಯವೆಂಬಾತನು (ಲೊಗೋಸ್) ಮಾಂಸಧಾರಿಯಾದನು, "ಸ್ತ್ರೀಯಲ್ಲಿ ಜನಿಸಿದನು" "ಅಬ್ರಹಾವುನ ಸಂತಾನವಾದನು" ಆದರೂ ಕುಲಷಿತಗೊಳ್ಳಲಿಲ್ಲ, ಹೀಗಾಗಿ ಆದಾಮನ ಮತ್ತು ಮತ್ತು ಆತನ ಸಂತಾನದವರ ಯೋಗ್ಯವಾದ ಈಡುಬಲಿಯಾದನು ಎಂಬುದನ್ನು ಪರೀಕ್ಷಿಸಲು ಮುಂದುವರೆಯುತ್ತಿದ್ದೇವೆ.

ದೇವರ ವಾಕ್ಯದ ಪ್ರಕಾರ, ಇರುವ ಎಲ್ಲಾ ವಸ್ತುಗಳೂ, ಜೀವಕರ ಚೇತನ ಅಥವಾ ಜೀವಿ ಇವುಗಳೆಲ್ಲವೂ ತಂದೆಯಿಂದಲೇ ಬಂದವುಗಳು, ತಾಯಿಯಿಂದಲ್ಲ. ತಾಯಿಯು ತಂದೆಯಿಂದ ವೀರ್ಯ ಅಥವಾ ಜೀವದ ಬೀಜವನ್ನು ಪಡಕೊಳ್ಳುತ್ತಾಳೆ, ಅದನ್ನು ಜೀವಕಣದಲ್ಲಿ ಸಜ್ಜುಗೊಳಿಸುತ್ತಾಳೆ. ಇದರಿಂದ ಒಂದು ರೂಪ ಅಥವಾ ದೇಹವು ಉತ್ಪತ್ತಿಯಾಗುತ್ತದೆ. ಅದು ಸ್ವತಂತ್ರ್ಯವಾಗಿ ಜೀವಿಸುವವರೆಗೂ ಅಂದರೆ ಭೂಮಿ ಮತ್ತು ಗಾಳಿ ಒದಗಿಸುವ ಸಂರಕ್ಷಣಾ ವಸ್ತುಗಳನ್ನು ಅದು ಸ್ವತಂತ್ರ್ಯವಾಗಿ ಪೂರೈಸಿಕೊಂಡು ತನ್ನನ್ನು ತಾನು ಸಂರಕ್ಷಿಸಿಕೊಳ್ಳುವ ಸಾಮರ್ಥ್ಯ ಹೊಂದಿಕೊಳ್ಳುವವರೆಗೆ ಅಂದರೆ ಜನನ ತಾಳುವವರೆಗೆ ಅಂಕುರ ಅಥವಾ ಮೂಲ ಜೀವಾಣುವನ್ನು ಪಾಲಿಸುತ್ತಾಳೆ.

'ತಂದೆ' ಎಂಬ ಪದಕ್ಕೆ 'ಜೀವದಾಯಕ' ಎಂಬ ಮಹತ್ವವಿದೆ. ಅದೇ ಪ್ರಕಾರವಾಗಿ ದೇವರು 'ತಂದೆಯು' ಅಥವಾ 'ಜೀವದಾಯಕನು' ಆಗಿರುವಾಗ (ಲೂಕ 3:38). ಅದೇ ಸಮಯದಲ್ಲಿ ಭೂಮಿಯು ಆದಾಮನ, ಮತ್ತು ಆ ಮೂಲಕ ಮಾನವ ಜನಾಂಗದ ತಾಯಿಯಾಗಿದ್ದಾಳೆ. ಆದಾಮನ ರೂಪ ಮತ್ತು ಅಂಗಾಗಗಳು ಭೂಮಿಯ ಮಣ್ಣಿನಿಂದ ಮಾಡಲ್ಪಟ್ಟವು (ಆದುದರಿಂದ ಅದು ಆತನ ತಾಯಿಯ ಪಾತ್ರ ನೆರವೇರಿಸಿದೆ). ಆದರೆ, ಆತನನ್ನು ಮನುಷ್ಯನನ್ನಾಗಿ ಮಾಡಿದ ಆ 'ಜೀವಕಣ'ವು ದೇವರಿಂದಲೇ ಬಂದುದು. (ಹೀಗಾಗಿ ಆತನೇ ತಂದೆ

ಅಥವಾ ಜೀವದಾಯಕನಾಗಿದ್ದಾನೆ); ಮಾನವ ಜಾತಿಯ ಪುರುಷರಲ್ಲಿ ಆ ಜೀವಕಣವು ನೆಲೆಯಾಗಿದ್ದು ಅದಕ್ಕೆ ಸಂತಾನಾಭಿವೃದ್ಧಿ ಬೀಜವನ್ನು ಒದಗಿಸುವ ಶಕ್ತಿಯಿದೆ.

ಈ ತತ್ವಕ್ಕೆ ಸಾಮರಸ್ಯವಾಗಿ, ಮಕ್ಕಳು ತಂದೆಯಿಂದ ಬಂದವರು, ತಾಯಿ ಅವರನ್ನು ಹೆತ್ತವಳು ಎಂದು ಹೇಳಲಾಗುತ್ತಿದೆ. (ಆದಿ 24:47 ನೋಡಿರಿ). ಅದೇ ರೀತಿಯಲ್ಲಿ ಯಾಕೋಬನ ಮಕ್ಕಳು, ಆತನ ಮಕ್ಕಳ ಮೂಲಕ ಎಣಿಸಲ್ಪಟ್ಟವರು. ಅವರು ಐಗುಪ್ತಕ್ಕೆ ಬಂದಾಗ ಒಟ್ಟು ಎಪ್ಪತ್ತು ಮಂದಿ ಇದ್ದರು (ಆದಿ. 46:27). ಈ ಎಲ್ಲಾ ಎಪ್ಪತ್ತು ಆತ್ಮಗಳೂ ಯಾಕೋಬನ ಟೊಂಕದಿಂದಲೇ ಬಂದವರು ಎಂದು ಹೇಳಲಾಗುತ್ತದೆ (ವಿಮೋ. 1:5). ಆದರಂತೆ ಸೊಲೊಮೋನನು. ಆತನು ದಾವೀದನ ಟೊಂಕದಿಂದ ಬಂದವನು ಅಂದರೆ ಆತನಿಂದ ಹುಟ್ಟಿದವನು ಎಂದು ಹೇಳಲಾಗಿದೆ (1 ಅರಸು 8:19, 2 ಪೂರ್ವ 6:9). ಅದರಂತೆ, ಅಪೋಸ್ತಲನಾದ ಪೌಲನು ಮತ್ತು ಇಸ್ರಾಯೇಲ್ಯರೂ ತಾವುಗಳು ಸಹಾ ಅಬ್ರಹಾಮನ ಕುಟುಂಬದಲ್ಲಿ ಜನಿಸಿ ಬಂದವರೆಂದು ಹಕ್ಕಿನಿಂದ ಹೇಳಿಕೊಳ್ಳುತ್ತಿದ್ದರು. ಲೇವಿಯ ಬಗ್ಗೆ **"ಮೆಲ್ಕಿಜೆದಕನು ಲೇವಿಯ ಮೂಲ ಪುರುಷನನ್ನು ಎದುರುಗೊಂಡಾಗ ಲೇವಿಯು ತತ್ವರೂಪವಾಗಿ ಇವನೊಳಗೆ ಇದ್ದನು"** (ಇಬ್ರಿಯ 7:10) ಎಂದು ಬರೆಯಲ್ಪಟ್ಟಿದೆ.

ಈ ರೀತಿಯಲ್ಲಿ ಇಡೀ ಜನಾಂಗವು ಅವರ ಆದಿ ತಂದೆಯಾದ ಆದಾಮನಲ್ಲಿ ಮತ್ತು ಆತನ ಜನಾಂಗದಲ್ಲಿ ಆದಿ ಮಾತೆಯಾದ ಹವ್ವಳ ಮೂಲಕ ಉತ್ಪನ್ನಗೊಳ್ಳಲ್ಪಟ್ಟಿದೆ. ಆದರೆ ಆಕೆಯಿಂದ ಅಲ್ಲ. ಆ ಕಾರಣದಿಂದ "ಆದಾಮನವರೆಲ್ಲರೂ ಮರಣಹೊಂದುವರು" ಎಂದು ಬರೆಯಲ್ಪಟ್ಟಿದೆಯೇ ಹೊರತು ಹವ್ವನವರೆಲ್ಲರೂ ಎಂದಲ್ಲ. ಯಾಕೆಂದರೆ, ಜನಾಂಗವು ಆದಾಮನಿಂದ ಬಂದ ಕಾರಣ, ಅದು ಆತನ ವಿಚಾರಣೆಯಲ್ಲಿಯೇ ವಿಚಾರಿಸಲ್ಪಡುವುದು, ಆತನ ವಿಫಲತೆಯಲ್ಲಿಯೇ ಖಂಡಿಸಲ್ಪಡುವುದು ಮತ್ತು ಆತನ ದಂಡನೆಯಲ್ಲಿಯೇ ಸೇರಿಸಲ್ಪಡುವುದು.

ಸತ್ಯವೇದವು ಬೋಧಿಸುವ ಇದು ಮಾನವ ಜನಾಂಗ ಮತ್ತು ಎಲ್ಲಾ ಸಸ್ತನಿ ಜೀವಿಗಳ ಮೇಲಿನ ಸಂತಾನೋತ್ಪನ್ನ ವಿಜ್ಞಾನದ ಇತ್ತೀಚಿನ ಕಾರಣಪೂರಕ ಊಹೆ. ವಿಜ್ಞಾನಿಗಳು ಜೀವವು ಯಾವಾಗಲೂ ಗಂಡು ಪ್ರಾಣಿಯಿಂದಲೇ ಬರುವಂತಾದ್ದಾಗಿದೆ ಎಂಬುದಕ್ಕೆ ಪಕೃತಿಯಲ್ಲಿ ಸಾಕಷ್ಟು ಮತ್ತು ನಿರ್ಧಾರಾತ್ಮಕವಾದ ರುಜುವಾತನ್ನು ಕಂಡುಕೊಂಡಿದ್ದಾರೆ. ಇದಕ್ಕೆ ಒಂದು ಸರಳವಾದ ಉದಾಹರಣೆಯೆಂದರೆ ಕೋಳಿ ಮೊಟ್ಟೆ. ತನ್ನಷ್ಟಕ್ಕೇ ಇದರಲ್ಲಿ ಯಾವ ಜೀವವೂ ಇಲ್ಲ. ಅದು ಕೇವಲ ಮೊಳಕೆಯ ಕಣವಷ್ಟೆ. ಅದರಲ್ಲಿ ಗಂಡು ಕೋಳಿಯಿಂದ ಜೀವದ ಬೀಜವು ಬಂದು ಸೇರಿ ಗರ್ಭಧಾರಣೆಯಾದಾಗ ಉಜ್ಜೀವಿಸುವ ಜೀವಧಾರಿ ರಚನೆಯು ಫಲದಾಯಕವಾಗುವಂತೆ ಅದರ ಪೋಷಣೆಗೆ, ಬೆಳವಣಿಗೆಗೆ ಅವಶ್ಯವಾದ ಪೌಷ್ಟಿಕ ದ್ರವಗಳು ಅದರಲ್ಲಿಯೇ ಇರುತ್ತವೆ.

ಮೊಟ್ಟೆಯಲ್ಲಿ ಜೀವಾಣುವು ಮಾತ್ರವಲ್ಲ, ಅದರಲ್ಲಿ ಪೌಷ್ಟಿಕ ಸಂಗತಿಗಳೂ ಜೀವಾಣುವಲ್ಲಿ ಸೂಕ್ಷ್ಮವಾದ ಸೂಕ್ತ ಅನುಪಾತದಲ್ಲಿ ಇರುತ್ತವೆ ಮತ್ತು ಯುಕ್ತವಾದ ಅವಸ್ಥೆಯಲ್ಲಿ ಶರೀರ ರಚನೆಯು ವೃದ್ಧಿಗೊಳ್ಳುತ್ತದೆ. ಜೀವಾಣು ಅಥವಾ ರಚನಾತ್ಮಕ ಲೋಳೆಯು ಅಥವಾ ಜೀವದ್ರವ್ಯವು ಜೀವಾಣುವನ್ನು ಅಂಗೀಕರಿಸಿಕೊಳ್ಳುತ್ತದೆ ಮತ್ತು ಇದು ಕೋಳಿಮರಿ ಭ್ರೂಣದ ಆರಂಭ ಸ್ಥಿತಿಯನ್ನು ತಲಪುತ್ತದೆ. ಅದು ತನ್ನ ಸ್ವಂತ ಬೆಳವಣಿಗಾಗಿ 'ಆಹಾರ ಲೋಳೆ' ಅಥವಾ ತತ್ತಿಯ 'ಬಿಳಿಲೋಳೆ'ಯನ್ನು ನೇಮಿಸಿಕೊಳ್ಳುತ್ತದೆ. ಇದು ಒಡೆಯುವವರೆಗೆ ಒಂದು ಒರಟಾದ ಸಿಪ್ಪೆಯನ್ನು ನೇಮಿಸಿಕೊಳ್ಳುತ್ತದೆ. ಇಲ್ಲಿ ಒಳಗೊಂಡಿರುವ ತತ್ವಗಳೆಲ್ಲವೂ ಮಾನವ ಅಥವಾ ಇತರ ಪ್ರಾಣಿಗಳ ತತ್ವಗಳಿಗೆ ಅನುಸಾರವಾಗಿಯೇ ಇದೆ.

ಸತ್ಯವೇದದ ಮತ್ತು ವಿಜ್ಞಾನದ ಈ ಸಾಮರಸ್ಯವುಳ್ಳ ಸಾಕ್ಷ್ಯಗಳ ದೃಷ್ಟಿಯಲ್ಲಿ, ವಿವೇಚನಾ ಊಹೆ ಎಂದರೆ, ತಂದೆಗಳು ಸಮರ್ಪಕರಾಗಿದ್ದರೆ, ಮಕ್ಕಳೂ ಸಹಾ ಸಮರ್ಪಕರಾಗಿರುತ್ತಾರೆ. ಮಿತವಾದ ಅನುಕೂಲಕರ ಸನ್ನಿವೇಶಗಳಲ್ಲಿ ಸರ್ವಸಂಪೂರ್ಣವಾದ ಜೀವಾಣು ಅಥವಾ ಜೀವದ ಬೀಜವು ಹೆಣ್ಣು ಜೀವಕಣದೊಂದಿಗೆ ಸಂಯೋಗಗೊಂಡಾಗ ಜೀವವುಳ್ಳ ಭ್ರೂಣವೊಂದನ್ನು ಸಿದ್ಧಪಡಿಸುತ್ತದೆ. ಅದು ಎಷ್ಟೋ ಸತ್ವವುಳ್ಳದ್ದಾಗಿದ್ದೂ, ಆರೋಗ್ಯಕರವಾದುದ್ದೂ ಆಗಿದ್ದು ಯುಕ್ತವಾದ ಪೌಷ್ಟಿಕಾಂಶಗಳನ್ನು ವಿನಿಯೋಗಿಸಿಕೊಳ್ಳಲು ಮತ್ತು ಅಯುಕ್ತವಾದವುಗಳನ್ನು ವ್ಯರ್ಥಗೊಳಿಸಲು ಇಲ್ಲವೆ ಹೊರಗೆ ಹಾಕಲು ಶಕ್ತವಾಗಿರುತ್ತದೆ. ಈ ರೀತಿಯಾಗಿ ಉತ್ಪತ್ತಿಯಾದ ಸಮರ್ಪಕವಾದುದು ತನ್ನ ಸಮರ್ಪಕವಾದ ಕ್ರಿಯೆಗಳಿಂದ ತನಗೆ ಉಪಯೋಗವಿಲ್ಲದವುಗಳನ್ನು ಯಾವ ಹಾನಿಯೂ ತಟ್ಟದಂತೆ ಪರಿಣಾಮಹೀನಗೊಳಿಸಲು ಅಥವಾ ನಿವಾರಣೆಗೊಳಿಸಲು ಶಕ್ತವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಜೀವಾಣು ಇಲ್ಲವೆ ಜೀವಕಣವು ಅಸಮರ್ಪಕವಾದ ಅನುಪಾತದಲ್ಲಿ ಜೀವಿಸುವ ಭ್ರೂಣವು ಬಲಹೀನಗೊಳ್ಳುತ್ತದೆ ಮತ್ತು ಅನಾನುಕೂಲ ಹವಾಮಾನ ಸ್ಥಿತಿಯನ್ನು ಎದುರಿಸಲು ಅದಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಅದು ಅದರ ತಾಯಿಯು ಬಳಸುವುದನ್ನೇ ಅದು

ಒಳ್ಳೆಯದಾಗಲೀ, ಕೆಟ್ಟದ್ದಾಗಲೀ ಅದನ್ನೇ ತಾನೂ ಬಳಸಿಕೊಳ್ಳುತ್ತದೆ. ಹೀಗಾಗಿ ರೋಗಕ್ಕೆ ತುತ್ತಾಗುತ್ತದೆ. ಅದು ಅಸಂಪೂರ್ಣವಾಗಿರುವುದರಿಂದ, ವಿಷಾನಕ ಪದಾರ್ಥಗಳನ್ನು ಪೂರ್ಣವಾಗಿ ತಿರಸ್ಕರಿಸಲು ಅದರಿಂದ ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ ಅದಕ್ಕೆ ಬಲಹೀನತೆ ಮತ್ತು ರೋಗವು ಉಂಟಾಗುತ್ತದೆ.

ಇಲ್ಲಿ ನಿರೂಪಿಸಿರುವ ತತ್ವವು ಹಳೆಯ ಗಾದೆಯ ಮಾತಿನಂತೆ "ಒಬ್ಬರ ಆಹಾರವು ಮತ್ತೊಬ್ಬರಿಗೆ ವಿಷ"ಎಂಬುದರ ಮೇಲೆ ಆಧಾರಗೊಂಡಿದೆ. ಒಳ್ಳೆಯ ಜೀರ್ಣಶಕ್ತಿಯುಳ್ಳ ಮನುಷ್ಯನು, ಚೆನ್ನಾಗಿ ತಿಂದು ಅದರಿಂದ ಪೌಷ್ಟಿಕಾಂಶಗಳನ್ನು ಶಕ್ತಿಯನ್ನೂ ಪಡಕೊಳ್ಳಬಹುದು. ಇದು ಒಂದು ವೇಳೆ ಬಲಹೀನ ಮನುಷ್ಯನನ್ನು ತ್ವರಿತವಾಗಿ ಕಾಯಿಲೆಗೆ ತುತ್ತಾಗಿಸಬಹುದು ಇಲ್ಲವೇ ಆತನಿಗೆ ಮರಣವನ್ನೂ ಉಂಟುಮಾಡಬಹುದು. ಹೆಚ್ಚು ಗಟ್ಟಿಮುಟ್ಟಾದವುಗಳು ಒಳ್ಳೆಯವುಗಳನ್ನು ಹಿಂಡಿ ತೆಗೆಯುತ್ತವೆ ಮತ್ತು ಹಾನಿಕರ ಅಂಶಗಳನ್ನು ತಡೆಗಟ್ಟುತ್ತವೆ. ಬಲಹೀನರು ಹೀಗೆ ಮಾಡಲು ಅಶಕ್ತರಾಗಿದ್ದಾರೆ ಮತ್ತು ನಿಜವಾಗಿಯೂ ರೋಗಕ್ಕೊಳಗಾಗುವ ಮಟ್ಟಿಗೆ ವಿಷಯುಕ್ತರಾಗಿದ್ದಾರೆ. ಆದರೆ, ನಮ್ಮ ಜನಾಂಗದ ಯಾರಾದರೂ ಪೂರ್ಣಮಟ್ಟದಲ್ಲಿ ಸಮರ್ಪಕರಲ್ಲ – ಯಾರೂ ತಮ್ಮ ಅಸಮರ್ಪಕ ದೇಹ ರಚನೆಗಳನ್ನು ಅಹಾರ, ಪಾನೀಯ ಮತ್ತು ಗಾಳಿಯ ಮೂಲಕ ದಾಳಿಪಡಿಸುವ ಕೋಟ್ಯಾನುಕೋಟಿ ವಿರೋಧ ಕಣಗಳಿಂದ ತಮ್ಮನ್ನು ರಕ್ಷಣೆಮಾಡಿಕೊಳ್ಳಲಾರರು ಎಂಬುದನ್ನು ನಾವು ನೆನಪುಮಾಡಿಕೊಳ್ಳಬೇಕು. ಇದರ ಪರಿಣಾಮವಾಗಿ ಯಾರೊಬ್ಬರೂ ಸರ್ವ ಸಂಪೂರ್ಣತೆಯುಳ್ಳವರಾಗಿ ಜನಿಸಿಲ್ಲ ಮತ್ತು ಕಾಯಿಲೆಯ ಅತಿಕ್ರಮಣನ್ನು ದೀರ್ಘಕಾಲ ತಡೆಗಟ್ಟಲಾರರು. ಇದು ಮೊಟ್ಟಮೊದಲಿಗೆ ಹೆಚ್ಚು ಬಲಹೀನ ಅಂಗವನ್ನು ತಿಂದು ಬಿಡುತ್ತದೆ, ನಂತರ ತ್ವರಿತದಲ್ಲಿ ಎಲ್ಲವೂ ನಾಶವಾಗುತ್ತವೆ.

ಈ ದೃಷ್ಟಿಕೋನದಿಂದ ತಾಯಿಯಾದ ಹವ್ವಳು ಮಾತ್ರವೇ ಪಾಪ ಮಾಡುತ್ತಿದ್ದರೆ ಜನಾಂಗವು ಮರಣಕ್ಕೆ ತುತ್ತಾಗುತ್ತಿರಲಿಲ್ಲ; ಆದಾಮನು ಸರ್ವಸಂಪೂರ್ಣನಾಗಿ ಉಳಿದಿದ್ದರೆ ಆತನ ಜೀವವು ಮುಟ್ಟುಗೋಲಾಗುತ್ತಿರಲಿಲ್ಲ, ಹಾನಿಗೊಳಗಾಗುತ್ತಿದ್ದಿಲ್ಲ. ಆತನ ಸಂತಾನದವರೂ ನಿರ್ದೋಷಿಗಳಾಗಿಯೇ ಜನಿಸುತ್ತಿದ್ದರು. ಮರಣದ ಶಿಕ್ಷೆಯು ತಾಯಿಯಾದ ಹವ್ವಳಿಗೆ ವಿಧಿಸಲ್ಪಟ್ಟಿದ್ದರೂ, ಆಕೆಗೆ ಅದು ಅಸಮರ್ಪಕತೆಯನ್ನು ಉಂಟುಮಾಡಿದ್ದರೂ, ಅದು ಆಕೆಯ ಸಂತಾನದವರನ್ನು ದುರ್ಬಲಗೊಳಿಸುತ್ತಿರಲಿಲ್ಲ; ಅವರೆಲ್ಲರೂ ಸಮರ್ಪಕ ರಾಗಿದ್ದುಕೊಂಡು ಅವರುಗಳು ಒಳ್ಳೆಯ ಅಂಶಗಳನ್ನು ಆಯ್ದುಕೊಳ್ಳುತ್ತಿದ್ದರು ಮತ್ತು ಅವರಿಗೆ ಒದಗಿಸಲ್ಪಟ್ಟ ಯಾವುದೇ ಅಸಂಪೂರ್ಣ ಪೌಷ್ಟಿಕ ಸಂಗತಿಗಳನ್ನು ಪರಿಣಾಮ ಹೀನಗೊಳಿಸುತ್ತಿದ್ದರು, ವ್ಯರ್ಥಗೊಳಿಸುತ್ತಿದ್ದರು ಮತ್ತು ಯಾವುದೇ ಹಾನಿಯಿಲ್ಲದೇ ಅಹಿತಕರವಾದವುಗಳನ್ನು ಸಾಗಹಾಕುತ್ತಿದ್ದರು.

ಮತ್ತೊಂದೆಡೆಯಲ್ಲಿ, ಆದಾಮನು ಮಾತ್ರವೇ ಪಾಪ ಮಾಡಿದ್ದು, ಹವ್ವಳು ಪಾಪರಹಿತಳಾಗಿ ಉಳಿದಿದ್ದರೆ ಆದಾಮನ ಖಂಡನೆ ಮತ್ತು ಮರಣಶಿಕ್ಷೆ ಇವುಗಳು ಇಡೀ ಪೀಳಿಗೆಯವರಿಗೆ ಅಷ್ಟೇ ದುಷ್ಪರಿಣಾಮಗಳನ್ನು ಉಂಟುಮಾಡುವುದಾಗಿತ್ತು. ಜೀವಾಣುಗಳು ಮತ್ತು ಅವುಗಳಿಗೆ ತಾಯಿ ಹವ್ವಳು ಒದಗಿಸುವ ಪೌಷ್ಟಿಕಾಂಶಗಳು ಎಷ್ಟೇ ಸಮರ್ಪಕವಾಗಿದ್ದರೂ, ಕೇವಲ ಅಸಮರ್ಪಕವಾಗಿ ಮರಣಹೊಂದುವ ವ್ಯಕ್ತಿಗಳು ಮಾತ್ರವೇ ಆದಾಮನ ರೋಗ ಪೀಡಿತವಾದ ವೀರ್ಯಾಣುಗಳು ಅಥವಾ ಜೀವ ಕಣಗಳಿಂದ ಉತ್ಪನ್ನವಾಗುತ್ತಿದ್ದರು. ಈ ರೀತಿಯಲ್ಲಿ **"ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು"** – 1 ಕೊರಿಂಥ 15:22 : ರೋಮಾ. 5:12, 19.

ಇಲ್ಲಿ ಮೊದಲನೆಯ ಹಾಗೂ ಎರಡನೆಯ ಆದಾಮನ ಮತ್ತು ಅವರ ಮದಗಿತ್ತಿಯರ ಹೊಂದಿಕೆಯು ಎಷ್ಟೋ ಅದ್ಭುತವಾಗಿದೆ. ಜನಾಂಗದ ಮರಣವು ಹವ್ವಳ ಮೇಲೆ ನಿರ್ಭರವಾಗಿರದೇ ಸಂಪೂರ್ಣವಾಗಿ ಆದಾಮನ ಮೇಲೆ ನಿರ್ಭರವಾಗಿದ್ದರೂ ಆಕೆಯು ಅದರ ಬರೋಣದಲ್ಲಿ ಪಾಲುದಾರಳಾಗಿದ್ದಾಳೆ. ಇದೇ ರೀತಿ ವಿಮೋಚನೆಗೊಂಡ ಸಂತಾನದ ಪುನಃಸ್ಥಾಪಿತ ಜೀವಿತವು ಕ್ರಿಸ್ತನ ಮದಲಗಿತ್ತಿಯ ಮೇಲೆ ಹೇಗೂ ನಿರ್ಭರವಾಗಿಲ್ಲ ಆದರೆ ದೇವರ ಕೃಪೆಯಿಂದ ಆತನ ವಧುವು **"ಕಳೆದುಹೋದದ್ದನ್ನು"** ಪುನಃಸ್ಥಾಪಿಸುವಲ್ಲಿ ಪಾಲುದಾರಳಾಗುತ್ತಾಳೆಯಾದರೂ ಎಲ್ಲವೂ ವಿಮೋಚಕನಾದ ಯೇಸುವಿನ ಮೇಲೆ ನಿರ್ಭರಗೊಂಡಿದೆ.

ನೀರಿನ ಬುಗ್ಗೆಯಾದ ಆದಾಮನು ಪಾಪ ಮತ್ತು ಮರಣದಿಂದ ಕುಲಷಿತನಾಗಿದ್ದು, ಆತನ ಪೀಳಿಗೆಯವರಲ್ಲಿ ಯಾರೂ ಈ ಮಾಲಿನ್ಯದಿಂದ ಮುಕ್ತರಾಗಿರಲು ಸಾಧ್ಯವಿಲ್ಲ. **"ಅಶುದ್ಧದಿಂದ ಶುದ್ಧವು ಉಂಟಾದೀತೇ? ಎಂದಿಗೂ ಇಲ್ಲ"** (ಯೋಬ 14:3). ಇಲ್ಲಿ ಉಲ್ಲೇಖಿಸಿರುವ ಮಾತುಗಳು ಪುರುಷನಿಗೆ ಅನ್ವಯಿಸಲಾಗಿದೆಯೇ ಹೊರತು ಸ್ತ್ರೀಗಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ಅಶುದ್ಧವಾದ ನೀರಿನ ಬುಗ್ಗೆಯಿಂದ ಬರುವ ಮತ್ತು ಹೊಗುವ ಯಾರೂ ಶುದ್ಧರಾಗಿರಲು ಸಾಧ್ಯವಿಲ್ಲ. ಆದುದರಿಂದ **"ನೀತಿವಂತರು ಇಲ್ಲ, ಒಬ್ಬನಾದರೂ ಇಲ್ಲ"** (ರೋಮಾ. 3:10). ಯಾರೂ

ತನ್ನ ಸ್ವಂತ ಪ್ರಾಣವನ್ನು ಬಿಡಿಸಿಕೊಳ್ಳಲಾರರು. **"ಆದರೆ, ಯಾವನಾದರೂ ತನ್ನ ಸಹೋದರನು ಸಮಾಧಿಯಲ್ಲಿ ಸೇರದೆ ಶಾಶ್ವತವಾಗಿ ಬದುಕಿರುವುದಕ್ಕಾಗಿ ದೇವರಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು. ಮರಣವನ್ನು ಬಿಡಿಸಿಕೊಳ್ಳುವುದಕ್ಕೆ ಎಷ್ಟು ಹಣ ಕೊಟ್ಟರೂ ಸಾಲುವುದೇ ಇಲ್ಲ. ಅಂಥಾಃ ಪ್ರಯತ್ನವು ನಿಷ್ಫಲವೆಂದು ಬಿಟ್ಟುಬಿಡಬೇಕು"** – ಕೀರ್ತನೆ 49:7–9.

ಗರ್ಭಧಾರಣೆಯ ಸಮಯದಲ್ಲಿ ತಾಯಿಯ ಮನಸ್ಸು ಆಕೆಯ ಮಕ್ಕಳ ಗುಣಲಕ್ಷಣಗಳ ಮೇಲೆ, ಪ್ರವೃತ್ತಿಯ ಮೇಲೆ ಒಳ್ಳೆಯ ಅಥವಾ ಕೆಟ್ಟ ಪರಿಣಾಮವನ್ನು ಬೀರುತ್ತದೆ ಎಂಬುದು ಎಲ್ಲಾರಿಗೂ ಗೊತ್ತಿರುವ ಸಂಗತಿ. 'ಮಾನಸಿಕ' ಮತ್ತು ದೈಹಿಕವಾದ ಕೆಲವೊಂದು ಜನನದ ಗುರುತುಗಳಿರುವ ಸಂಧರ್ಭಗಳು ಅನೇಕವಿವೆ. ಪೂರ್ಣವಾಗಿ ಅಥವಾ ಸಮರ್ಪಕವಾದ ಜೀವಕಣದಿಂದ ಪಡೆದು ಬಂದ ಸಮರ್ಪಕವಾದ ಭ್ರೂಣವು ತಾಯಿಯ ಕೆಟ್ಟ ಮನಸ್ಸಿನ ಕಾರಣ ಎಷ್ಟರ ಮಟ್ಟಿಗೆ ಹಾನಿಗೊಳ್ಳಬಹುದು ಎಂಬುದನ್ನು ಪ್ರಸ್ತುತ ಪರಿಸ್ಥಿತಿಯಲ್ಲಿ ಮಾನವ ಜಾತಿಯವರು ನಿರ್ಣಯಿಸಲು ಸಾಧ್ಯವಿಲ್ಲ. ಯಾಕೆಂದರೆ ಈ ದೆಸೆಯಲ್ಲಿ ಬೇಕಾದ ರುಜುವಾತುಗಳನ್ನು ಕಂಡುಕೊಳ್ಳುವ ಅವಕಾಶಗಳು ನಮಗಿರುವುದಿಲ್ಲ. ಈ ಪ್ರಸ್ತಾಪವನ್ನು ನಿರ್ಧರಿಸುವ ಬಗ್ಗೆ ವಾದಿಸುವ ಅಗತ್ಯವೂ ನಮಗಿಲ್ಲ, ಯಾಕೆಂದರೆ 'ಮಾನವನಾದ ಕ್ರಿಸ್ತನು' ಇಂಥಾಃ ಪರಿಸ್ಥಿತಿಯಲ್ಲಿ ಜನಿಸಲಿಲ್ಲ. ದೇವರ ವಾಕ್ಯಗಳು ಸ್ಪಷ್ಟವಾಗಿ ಹೇಳುವಂತೆ (1) 'ದೈವಾಶೀರ್ವಾದ' 'ದೇವರ ದಯೆ' ಹೊಂದಿದ ಪವಿತ್ರ ಸ್ತ್ರೀಯಾದ ಮರಿಯಳನ್ನು ತಂದೆಯಾದ ದೇವರು ಯೇಸುವಿಗೆ ತಾಯಿಯಾಗಿ ಆಯ್ಕೆ ಮಾಡಿಕೊಂಡನು (ಲೂಕ 1:28, 30,42), (2) ಮರಿಯಳಲ್ಲಿ ಸಂಪೂರ್ಣವಾದ ನಂಬಿಕೆಯಿತ್ತು, ಕರ್ತನಾದ ದೇವರ ಸಾಧನವಾಗಲೂ ಆಕೆಗೆ ಪೂರ್ಣವಾದ ಒಪ್ಪಿಗೆ ಮತ್ತು ಸಂತೋಷವಿತ್ತು (ಲೂಕ 1:38) (3) ಯೋಸೇಫನಿಂದಾಗಲೀ, ಪ್ರಪಂಚದವರಿಂದಾಗಲೀ ಬರಬಹುದಾದ ಯಾವುದೇ ಅವಹೇಳನಕ್ಕೆ ಆಕೆ ಅಂಜದೆ ಆಕೆಯು **"ನನ್ನ ಪ್ರಾಣವು ಕರ್ತನನ್ನು ಕೊಂಡಾಡುತ್ತದೆ. ನನ್ನ ಆತ್ಮವು ನನ್ನ ರಕ್ಷಕನಾದ ದೇವರ ವಿಷಯದಲ್ಲಿ ಉಲ್ಲಾಸಗೊಂಡಿದೆ..."** ಎಂದು ದೇವರನ್ನು ಕೊಂಡಾಡುವವಳಾಗಿದ್ದಾಳೆ (ಲೂಕ 1:46–47). ಹೀಗಾಗಿ ನಾವು ಯೇಸುವಿನ ತಾಯಿಯ ಮನಸ್ಸು ಆತನ ಬೆಳವಣಿಗೆಯನ್ನು ವಿರೋಧಿಸದೆ, ಸಮರ್ಪಕವಾದ ಫಲಿತಾಂಶಕ್ಕಾಗಿ ಸಹಕರಿಸಿತು ಎಂದು ಗ್ರಹಿಸಬಹುದು.

ಇದನ್ನು ಅನುಸರಿಸಿ ನಂತರದಲ್ಲಿ, ಒಬ್ಬ ಅಸಂಪೂರ್ಣಳಾದ, ದೋಷಿಯಾದ ಆದರೆ ಒಳ್ಳೆಯ ಚಿತ್ತವುಳ್ಳ ತಾಯಿಗೆ ಸಮರ್ಪಕನಾದ ವ್ಯಕ್ತಿಯ ಉತ್ಪಾದನೆಗೆ ಇರುವ ಒಂದೇ ಒಂದು ತಡೆಯೆಂದರೆ ಸಮರ್ಪಕವಾದ ವೀರ್ಯವುಳ್ಳ ಸಮರ್ಪಕನಾದ ತಂದೆಯ ಕೊರತೆ. ದೇವರ ವಾಕ್ಯದ ಬೋಧನೆಗಳಲ್ಲಿನ ಏಕರೂಪತೆಯು ಯೇಸುವಿನ ಜೀವಿತದಲ್ಲಿ ಸರ್ವಸಂಪೂರ್ಣವಾದ ಒಂದು ಜೀವಿತವು (ಆದಾಮನ ಬುಗ್ಗೆ ಯಿಂದುಂಟಾದುದಲ್ಲ) ಪ್ರಸ್ತುತ ಪೂರ್ವಸ್ಥಿತಿಯಿಂದ ಮಾನವ ಭ್ರೂಣ ಸ್ಥಿತಿಗೆ ದೇವರ ಶಕ್ತಿಯ ಮೂಲಕ ವರ್ಗಾಯಿಸಲ್ಪಟ್ಟು, ಅಸಮರ್ಪಕಳಾದ ತಾಯಿಯ ಮೂಲಕ **"ಪವಿತ್ರವಾದ"** (ಪವಿತ್ರವೂ ಸರ್ವ ಸಂಪೂರ್ಣವೂ ಆದ) ಶಿಶುವೊಂದರ ಜನನ ಸಾಧ್ಯವಾಯಿತು (ಲೂಕ 1:35). ಆ ರೀತಿಯಾಗಿ ಆ ಯೇಸುವು ಮಾನಸಿಕವಾಗಿಯಾಗಲೀ, ನೈತಿಕವಾಗಿಯಾಗಲೀ ಅಥವಾ ದೈಹಿಕವಾಗಿಯಾಗಲೀ ಕಲುಷಿತನಾಗಲಿಲ್ಲ. ಆತನ ತಾಯಿಯು ಸಮಸ್ತ ಜನಾಂಗದೊಡನೆ ಅಪರಿಪೂರ್ಣತೆಯಿಂದ ಕಲುಷಿತತೆಯಲ್ಲಿ ಪಾಲುದಾರಳಾಗಿರುವುದು ಪೂರ್ಣವಾಗಿ ಸಮಂಜಸವಾಗಿತ್ತು. ನಾವು ಈಗ ತಾನೇ ನೋಡಿದಂತೆ ಇದು ದೇವರ ವಾಕ್ಯಕ್ಕನುಸಾರ ವಾಗಿರುವುದು ಮಾತ್ರವಲ್ಲ, ಇತ್ತೀಚಿನ ವೈಜ್ಞಾನಿಕ ಪರಿಶೋಧನೆ ಮತ್ತು ನಿರ್ಣಯಗಳಿಗನು ಸಾರವಾಗಿಯೇ ಇದೆ.

ವಿಜ್ಞಾನಿಗಳು ತಮ್ಮೊಳಗೆ ನಿರೂಪಿಸುವ ಮತ್ತೊಂದು ಸತ್ಯ ಸಂಗತಿಯು ಸತ್ಯವೇದದ ಸಾಕ್ಷ್ಯದೊಂದಿಗೆ ಹೊಂದಿಕೆಯಾಗುತ್ತದೆ. ಅದ್ಯಾವುದೆಂದರೆ, ಜೀವಿಯು ತಂದೆಯಿಂದ ಬರುವುದಾಗ್ಯೂ ಅದರ ಸ್ವರೂಪ ಮತ್ತು ಸ್ವಭಾವಗಳು ತಾಯಿಂದ ಬರುತ್ತವೆ. ಈ ಬಗ್ಗೆ ವೈಜ್ಞಾನಿಕ ರುಜುವಾತುಗಳು ಅಸ್ಪಷ್ಟವಾಗಿವೆ ಮತ್ತು ಸಾಧಾರಣ ಜನರಿಂದ ಬಹಳ ಕಡಿಮೆಯಾಗಿ ಗ್ರಹಿಸಲ್ಪಡುತ್ತಿದೆ. ಯಾಕೆಂದರೆ ದೇವರ ಜ್ಞಾನವು ವಿವಿಧ ಬಗೆಗಳನ್ನು ಮತ್ತು ಸ್ವಭಾವಗಳನ್ನು ಪ್ರತ್ಯೇಕಗೊಳಿಸಿರುವುದಲ್ಲದೆ ಅವುಗಳು ಮಿಶ್ರವಾಗಿ ಅಥವಾ ಸ್ವಲ್ಪ ಮಟ್ಟವನ್ನು ಮೀರಿ ಬೆರತುಕೊಂಡು ತಮ್ಮ ಫಲಧಾಯಕತೆಯನ್ನು ಕಳೆದುಕೊಳ್ಳದಂತೆ ಹೆಚ್ಚಿನ ಪ್ರಮಾಣದಲ್ಲಿ ಅವುಗಳನ್ನು ಮಿತಿಗೊಳಿಸಿದೆ. ಇದರ ಸಾಮಾನ್ಯ ಉದಾಹರಣೆಯೆಂದರೆ **ಹೇಸರಗತ್ತೆ**. ಈ ಮಿಶ್ರಜಾತಿಯ ಪ್ರಾಣಿಯು ಸಂತಾನಾಭಿವೃದ್ಧಿ ಮಾಡಲಾರದು.

ಸ್ವರೂಪ ಮತ್ತು ಸ್ವಭಾವಗಳು ಗಂಡುಜಾತಿಯಿಂದ ಬಂದವು ಎಂಬ ಹಳೆಯ ಕಲ್ಪನೆಯು ಆಧುನಿಕ ವಿದ್ಯಾರ್ಥಿಗಳಿಂದ ತೊರೆಯಲ್ಪಟ್ಟಿದೆ. ಅವರುಗಳು ಈಗ ಹೆಣ್ಣು ಶರೀರ ರಚನೆಯನ್ನೂ, ಪೋಷಣ ಶಕ್ತಿಯನ್ನೂ ಒದಗಿಸುತ್ತದೆ ಎಂದು ಒಪ್ಪುತ್ತಾರೆ. ನಿಜವಾಗಿಯೂ ಅದು ಎಲ್ಲವನ್ನೂ ಒದಗಿಸಿದರೂ ಜೀವ ಕಣ ಇಲ್ಲವೆ ಬೀಜವು

ಮಾತ್ರ ತಂದೆಯಿಂದ (ಗಂಡುಪ್ರಾಣಿಯಿಂದ) ಅಥವಾ ಜೀವದಾಯಕನಿಂದಲೇ ಬರುವಂತಾದ್ದು. ಮೇಲೆ ತಿಳಿಸಿದ ಹಕ್ಕಿನ ಹೇಳಿಕೆಗಳ ಬಗ್ಗೆ ಸತ್ಯವೇದದ ಉದಾಹರಣೆಯಾದ ಮನುಷ್ಯ ಪುತ್ರಿಯವರೊಂದಿಗೆ ದೇವದೂತರುಗಳ ಸಂಗಮದ ಬಗ್ಗೆ ನೋಡೋಣ. (ಆದಿ 6:2,4). ದೇವದೂತರುಗಳು ತಮ್ಮ ತಕ್ಕಸ್ಥಾನವನ್ನು ಬಿಟ್ಟರು. ಅವರು ಮಾನವ ರೂಪವನ್ನು ಧರಿಸಿಕೊಂಡಾಗ ಜೀವನಶಕ್ತಿಯಲ್ಲಿ ಪರಿಪೂರ್ಣರಾಗಿದ್ದ ಕಾರಣ ಆದಾಮನ ಪತನಗೊಂಡ ಜನಾಂಗಗಳಿಗಿಂತ ಹೆಚ್ಚು ಬೌದ್ಧಿಕ ಕುಶಾಗ್ರತೆಯಲ್ಲಿಯೂ ಶಾರೀರಿಕ ಬಲದಲ್ಲಿಯೂ ಉನ್ನತರಾದವರನ್ನು ಹುಟ್ಟಿಸಿದರು. ಹೀಗಾಗಿ ಇವರನ್ನು 'ಮಹಾಶರೀರಿಗಳು' ಎಂದು ದಾಖಲಿಸಲಾಗಿದೆ. ಈ ಅದ್ಭುತರಾದ ವ್ಯಕ್ತಿಗಳು, ಪರಿಪೂರ್ಣಳಾದ ಹಾಗೂ ಮರಣಕ್ಕೆ ತುತ್ತಾಗಬಲ್ಲ ತಾಯಿಯಂದಿರ ಮೂಲಕ ಜನಿಸಿದರೆಂದು ನಾವು ನೆನಪುಮಾಡಿಕೊಳ್ಳಬೇಕಾಗುತ್ತದೆ. ಆದರೆ ಇವರುಗಳು ವೀರ್ಯವತ್ತರಾದ, ದುರ್ಬಲರಲ್ಲದ ತಂದೆಯರಿಗೆ ಜನಿಸಿದವರು.

ಆದಾಮನಿಂದ ಮರಣಕ್ಕೊಳಗಾದ ಜನಾಂಗಕ್ಕೆ ಕಠಿಣವಾಗಿ ದೊರೆತನ ಮಾಡುವ ಪತನಗೊಂಡ ಮಹಾಶರೀರಗಳು (Nephilim) ಎಂಬವರಿದ್ದರು. ಇವರನ್ನು ನಿತ್ಯ ಜೀವಕ್ಕಾಗಿ ಆಗುವ ಶೋಧನೆಗಾಗಲಿ ಅಥವಾ ಪಾಪದ ಸಂಬಳ ಮರಣಕ್ಕಾಗಲಿ ದೇವರು ಎಂದೂ ಪರಿಗಣಿಸಲಿಲ್ಲ. ದೇವರು ಅವರನ್ನು ಜಲಪ್ರಳಯದ ಮೂಲಕ ನಾಶಗೊಳಿಸಿ ಅವರ ಉಳಿಯುವಿಕೆಗೆ ಅನುಮತಿ ನೀಡದೇ ಹೋದದ್ದು, ನೂತನ ಜನಾಂಗಕ್ಕಾಗಿ ನೋಹ ಮತ್ತು ಆತನ ಕುಟುಂಬವನ್ನು ಆರಿಸಿ ಉಳಿಸಿಕೊಂಡದ್ದು ನಿಜವಾಗಿಯೂ ದೇವರ ಕೃಪೆಯೇ. 'ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು' (ಆದಿಕಾಂಡ 6:9) ಎಂದು ವಾಖ್ಯಾನಿಸುವಂತೆ ಅವರನ್ನು **"ನೀವು ಬಹು ಸಂತಾನವಾಗಿ ಹೆಚ್ಚಿರಿ, ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ"** (ಆದಿ. 9:1) ಎಂದು ಆಶೀರ್ವದಿಸಿದ್ದು ಆದಾಮನ ಹೆಚ್ಚಿನ ಸಂತಾನದವರು ಮಾನವ ರೂಪದ ದೇವದೂತರ ಸಂಗಮದಿಂದ ಅತಿಯಾಗಿ ಕುಲಷಿತಗೊಂಡಿದ್ದರು ಎಂಬ ಅಭಿಪ್ರಾಯವನ್ನು ನೀಡುತ್ತದೆ. ನಾವು ಇದನ್ನು ನೂತನ ಜನಾಂಗವೆಂದು ಹೇಳುವುದಕ್ಕೆ ಅವರ ನೂತನ ತಂದೆಯರಿಂದ ಅವರು ಪಡಕೊಂಡ ನೂತನ ಜೀವ ಮತ್ತು ಪ್ರಭಲವಾದ ಶಕ್ತಿಸಾಮರ್ಥ್ಯಗಳ ಕಾರಣ.

ಈ ಮಹಾಶರೀರಿಗಳು (Nephilim) ಪ್ರಖ್ಯಾತರಾಗಿದ್ದರು. ಅನ್ಯಜಾತಿಯ ಪುರಾಣಗಳಲ್ಲಿ ಕಂಡುಬರುವ ಭಯಾನಕರಾದ ರಾಕ್ಷಸರು (ದೈತ್ಯರು) ಇವರೇ. ಜಲಪ್ರಳಯದಲ್ಲಿ ಉಂಟಾದ ಅವರ ಸರ್ವನಾಶನದ ನೂರಾರು ವರ್ಷಗಳ ನಂತರವೂ ಇಂಥಾಃ ಮಹಾಶರೀರಿಗಳು ಇನ್ನೂ ಜೀವಿಸುತ್ತಿದ್ದಾರೆ ಎಂಬ ಸುಳ್ಳು ವರದಿಗಳು ಕೇಳಿಬರುತ್ತಿದ್ದು ಇತ್ತೀಚಿನ ಯುದ್ಧಗಳಲ್ಲಿ ಅವರು ಜಯಸಾಧಿಸಿದಾಗ ಇಸ್ರಾಯೇಲ್ಯರಲ್ಲಿ ತಲ್ಲಣವನ್ನುಂಟು ಮಾಡಿತ್ತು – **"ಅಲ್ಲಿ ನೆಫೀಲಿಯರನ್ನು ಅಂದರೆ ನೆಫಿಲಿಯ ವಂಶದವರಾದ ಉನ್ನತ ಪುರುಷರನ್ನು ನೋಡಿದೆವು"** (ಅರಣ್ಯ 13:33, 14:36–37). ಸತ್ಯವೇದದ ಬೇರೆಡೆಗಳಲ್ಲಿ ಕಂಡು ಬರುವಂತೆ (1 ಸಮು. 17ನೇ ಅಧ್ಯಾಯ ನೋಡಿರಿ) ಕಾನಾನಿನಲ್ಲಿಯೂ ಕೆಲವು ಎತ್ತರದ ವ್ಯಕ್ತಿಗಳಿದ್ದಿರಬಹುದು. ಆದರೆ ಮೇಲಿನ "ಅಶುಭ ಸಮಾಚಾರ" ಪ್ರಕಾರ ಅವರುಗಳು ಎಂದಿಗೂ ನೆಫೀಲಿ ವಂಶಸ್ಥರಾಗಿರಲಿಲ್ಲ.

ಜೀವವು ತಂದೆಯಿಂದ ಬರುತ್ತದೆ, ಶರೀರರಚನೆ ಮತ್ತು ಸ್ವಭಾವಗಳು ತಾಯಿಯಿಂದ ಉಂಟಾಗುತ್ತದೆ ಎಂಬುದಕ್ಕೆ ಮತ್ತೊಂದು ಉದಾಹರಣೆಯೆಂದರೆ ದೈವ ಸ್ವಭಾವದವನಾದ ಯೆಹೋವನು ತಾನೇ ವಿವಿಧ ಸ್ವಭಾವದ ಮಕ್ಕಳನ್ನು ಪಡೆದಿದ್ದಾನೆ. ಆತನು ದೇವದೂತರ ಸ್ವಭಾವುಳ್ಳ ಮಕ್ಕಳಿಗೆ (ಯೋಬ. 2:1, 38:6, ಇಬ್ರಿಯ 2:9) ಹಾಗೂ ಮಾನವ ಸ್ವಭಾವದ ಕೆಲವು ಮಕ್ಕಳಿಗೆ (ಲೂಕ 3:38) ಮತ್ತು ಪ್ರಥಮ ಪುನರುತ್ಥಾನದಲ್ಲಿ ಆತನ ದೈವಿಕ ಸ್ವಭಾವದಲ್ಲಿ ಪಾಲುದಾರರಾಗಿ ಕಂಡು ಬರುವ 'ನೂತನ ಸೃಷ್ಟಿ'ಗಳಿಗೆ (2 ಪೇತ್ರ 1:4) ತಂದೆ ಅಥವಾ ಜೀವದಾಯಕನಾಗಿದ್ದಾನೆ. ಯೆಹೋವನ ಆತ್ಮನು ಅಥವಾ ಶಕ್ತಿಯು ಉತ್ಪನ್ನಗೊಂಡ ಆತ್ಮಿಕ ವಸ್ತುಗಳ ಮೇಲೆ ಮತ್ತು ಪಕ್ವಗೊಂಡ ದೇವದೂತರುಗಳ ಮೇಲೆ ಕಾರ್ಯಸಾಧಿಸುವುದಾಗಿದೆ. ಇದೇ ಶಕ್ತಿ ಅಥವಾ ಚೇತನವು ಉತ್ಪನ್ನಗೊಂಡ ಮಾನವರು ಅಥವಾ ಕೆಳಮಟ್ಟದ ಜೀವಿಗಳೊಂದಿಗೂ ಕಾರ್ಯ ಪ್ರವರ್ತವಾಗಿದೆ (ಆದಿಕಾಂಡ 2:7, 1 ಕೊರಿಂಥ 15:47 ನೋಡಿರಿ) ದೇವರು ನಮಗೆ ದೈವ ಸ್ವಭಾವಕ್ಕೆ ನೂತನ ಸೃಷ್ಟಿಯ ಜನಾಂಗದವರ ಸ್ಪಷ್ಟವಾದ ಕಲ್ಪನೆಯನ್ನು ಕೊಡುವಾಗ ಆತನು ಅವರನ್ನು ಒಡಂಬಡಿಕೆಯೆಂಬ ಗರ್ಭದಿಂದ ಮಾಡಿದ ದೇವರ ವಾಕ್ಯವೆಂಬ ವಾಗ್ದಾನದ ಮೂಲಕ ಪಡಕೊಂಡವರೆಂದು ಪ್ರತಿನಿಧಿಸುತ್ತಾನೆ. ಆತನು ಈ ವಾಗ್ದಾನವನ್ನು ಅಬ್ರಹಾಮನಿಗೆ ಮಾಡಿದ್ದು ಇದು ಸಾರಳೆಂಬ ಸ್ತ್ರೀಯ ಮೂಲಕವಾಗಿ ಸಂಕೇತಗೊಂಡಿತ್ತು ಮತ್ತು ಇಸಾಕನು ಅಬ್ರಹಾಮನ ವಾರಸುದಾರನೆಂದು ವಾಗ್ದಾನದ ಮಗನೆಂದು ನಮಗೆ ಹೇಳಲಾಗಿತ್ತು. ಇಸಾಕನಂತೆ ನಾವು ಸಹಾ ದೇವರ ಪುತ್ರರೂ, ವಾಗ್ದಾನದ ಮಕ್ಕಳೂ, ಸಾರಳ ಒಡಂಬಡಿಕೆಯ ಸಂತಾನದವರೂ

ಆಗಿದ್ದೇವೆ – ಗಲಾತ್ಯ 4:23–31, 1; ಪೇತ್ರ 1:3,23; 2 ಪೇತ್ರ 1:04.

ಇದೇ ತತ್ವವು ಕ್ರೈಸ್ತ ಯುಗಕ್ಕೂ ಮುನ್ನವೇ ಸಾಂಕೇತಿಕವಾದ ಯೆಹೂದ್ಯರ ದೈವೀಕ ವ್ಯವಸ್ಥೆಯಲ್ಲಿ, ಒಂದು ಮಗುವು ತಂದೆಯ ಆಶೀರ್ವಾದ ಮತ್ತು ಸೌಕರ್ಯಗಳನ್ನು ವಂಶಪಾರಂಪರ್ಯವಾಗಿ ತಾಯಿಯ ಕೃಪೆ ಮತ್ತು ನಿಲುವಿಗೆ ಅನುಗುಣವಾಗಿ ಪಡಕೊಳ್ಳುತ್ತದೆ ಎಂಬುದರಲ್ಲಿ ನಿರೂಪಿಸಲ್ಪಡುತ್ತದೆ ಮತ್ತು ಅದೇ ರೀತಿಯಲ್ಲಿ ಮತ್ತು ಮಗುವಿಗೆ ಅಂಟಿಕೊಂಡಿರುವ ತಾಯಿಯ ಸ್ವಭಾವವನ್ನು, ಹಕ್ಕುಗಳನ್ನು, ಸೌಕರ್ಯಗಳನ್ನು ಹಾಗೂ ಅನಿರ್ಭಂದತೆಗಳನ್ನು ಪ್ರಕಟಿಸುತ್ತದೆ. ಇವುಗಳು ತಂದೆಯದಾಗಬೇಕೆಂಬ ಅನಿವಾರ್ಯತೆ ಇರುವುದಿಲ್ಲ – ಆದಿ. 21:10, ವಿಮೋ. 21:4; ಗಲಾತ್ಯ 4:30.

ಮೇಲೆ ಹೇಳಿದ ವಾದಗಳು ನಮ್ಮ ಕರ್ತನಾದ ಯೇಸುವು ಸ್ತ್ರೀಯೊಬ್ಬಳಲ್ಲಿ ಜನನ ತಾಳಿದನು ಎಂಬ ಸತ್ಯಾಂಶದಿಂದ ದೃಢಪಟ್ಟಿವೆ. 'ಪವಿತ್ರವಾದ ಶಿಶುವು' ಸ್ತ್ರೀಯಿಂದ ಜನಿಸಿದವನಾಗಿ ಆಕೆಯ ಸ್ವಭಾವದಲ್ಲಿ ಅಂದರೆ ಮಾನವ ಸ್ವಭಾವದಲ್ಲಿ – ಭೂಮಿಯಿಂದ, ಭೂಮಿಯವನಾಗಿ – ಪಾಲು ತೆಗೆದುಕೊಂಡನು. ಆತನ ಪೂರ್ವ ಆತ್ಮೀಕಸ್ಥಿತಿಯಲ್ಲಿದ್ದ ಎಲ್ಲಾ ಪವಿತ್ರತೆಯನ್ನೂ, ಸಮರ್ಪಕತೆಯನ್ನೂ ಆತನು ಉಳಿಸಿಕೊಂಡ ನಾದರೂ, ವರ್ಗಾಯಿಸಲ್ಪಟ್ಟ ಜೀವಕಣವು (ನಾವೀಗ ಪರೀಕ್ಷೆಮಾಡುತ್ತಿರುವ ನಿಯಮದೊಂದಿಗೆ ಸಾಮರಸ್ಯ ದಿಂದೊಡಗೂಡಿ) ತಾಯಿಯ ಸ್ವಭಾವದಲ್ಲಿ ಪಾಲು ತೆಗೆದುಕೊಂಡು, ಸ್ತ್ರೀಯಲ್ಲಿ ಜನಿಸುವುದರ ಮೂಲಕ 'ಮಾಂಸ ಶರೀರ'ವಾಯಿತು. ಹೀಗಿದ್ದರೂ ಈ ಪರಿಶುದ್ಧವಾದುದು ಅಪರಿಶುದ್ಧವಾದ ಸಂತತಿಯಿಂದ ಹೊರ ಬರಲಿಲ್ಲ. ಆದರೆ ಅದು ತಂದೆಯಾದ ದೇವರಿಂದಲೇ ಹೊರಟು ಬಂದು ತಾಯಿಯಾದ ಮರಿಯಳಿಂದ ಬೆಳವಣಿಗೆಯನ್ನೂ, ಪುಷ್ಠಿಯನ್ನೂ ಮಾತ್ರ ಪಡಕೊಂಡಿತು – ಯೋಹಾನ 8:42, ಗಲಾತ್ಯ 4:4.

ಇದೇ ತತ್ವಕ್ಕೆ ಇನ್ನೂ ಮುಂದುವರೆದ ಹೊಂದಾಣಿಕೆಯಲ್ಲಿ ನಮ್ಮ ಕರ್ತನಾದ ಯೇಸುವು ದೇವರ ಸ್ವಭಾವಕ್ಕೆ ಉನ್ನತವಾಗಿ ಏರಿಸಲ್ಪಟ್ಟವನಾಗಿರುವುದರಿಂದ, ಆತನು ಇನ್ನು ಮುಂದೆ ಮನುಷ್ಯನಾಗಿ ಉಳಿಯದಿದ್ದರೂ, ಮಾನವ ಜನಾಂಗಕ್ಕೆ ತಂದೆ ಅಥವಾ ಜೀವದಾಯಕನೆಂದು ಸ್ಪಷ್ಟಪಡಿಸಿದೆ. ಅಲ್ಲದೇ ಆದಾಮನ ಪಾಪದಿಂದ ಮಾನವ ಸಂತತಿಯನ್ನು ಮಾನವ ಪ್ರವೃತ್ತಿಗೆ ಪರಿಪೂರ್ಣತೆ ಪಡೆಯಲು ಪುನಃಸ್ಥಾಪಿಸುವ ಕಾರ್ಯವೂ ಅಡಗಿದೆ. ಹೀಗೆ ತಂದೆಯೂ, ಜೀವದಾಯಕನಾಗಿ ದೈವಿಕ ತಲದಲ್ಲಿದ್ದರೂ, ಆತನ ಮಕ್ಕಳು ಮಾನವ ತಲದಲ್ಲಿರುವರು. ಅವರನ್ನು ಪುನಃವಶದ ಒಡಂಬಡಿಕೆಯಲ್ಲಿ ಜನಿಸಿದವರಾದ ಅಬ್ರಹಾಮನ ಮೂರನೆಯ ಪತ್ನಿಯಾದ ಕೆಟೂರಳಲ್ಲಿ ವಿಶದಗೊಳಿಸಲಾಗಿದೆ.

ನಮ್ಮ ಪ್ರಸ್ತಾಪವನ್ನು ಈಗ ಪುನರ್ ಪರಿಶೀಲಿಸುವಾಗ, ನಮ್ಮ ಕರ್ತನ ಅದ್ಭುತವಾದ ಜನನವು ಸರ್ವ ಸಂಪೂರ್ಣವಾದುದು, ಆತನು ಅಪರಿಪೂರ್ಣ ತಾಯಿಂದ ಜನಿಸಿದ ನಿರ್ದೋಷಿ, ನಿಷ್ಕಳಂಕ, ಸೃಷ್ಟಿಕರ್ತನ ವಾಡಿಕೆಯ ಪದ್ಧತಿಗೆ ವಿರುದ್ಧವಾಗಿರದೆ ಅವುಗಳಿಗೆ ಪೂರ್ಣ ಸಾಮರಸ್ಯವಾಗಿರುವುದನ್ನು ಅವಲೋಕಿಸುತ್ತೇವೆ. ಅದೇ ರೀತಿಯಲ್ಲಿ ತಂದೆಯಾದ ಆದಾಮನು ಸಹಾ ಸರ್ವಸಂಪೂರ್ಣತೆಯುಳ್ಳವನಾಗಿ ಜನಿಸಿದನು, ಯಾಕೆಂದರೆ ಆತನ ತಾಯಿಯು ಭೂಮಿಯಾಗಿದ್ದು ವಿಶೇಷವಾಗಿ ಉಂಟುಮಾಡಲ್ಪಟ್ಟ ಏದೇನ್ ತೋಟದ ಹೊರತಾಗಿ ಉಳಿದ ಭೂಭಾಗವು ಅಸಮರ್ಪಕ ವಾಗಿರುವಾಗಲೂ ಆತನು ದೇವರಿಂದ ನೇರವಾಗಿ ಉಂಟುಮಾಡಲ್ಪಟ್ಟವನು. ನಮ್ಮ ಕರ್ತನಾದ ಯೇಸು ಮಾನವ ಪೂರ್ವ ಸ್ಥಿತಿಯೊಂದನ್ನು ಹೊಂದಿದ್ದನು ಎಂಬ ದೇವರ ವಾಕ್ಯ ಭರವಸವು, ಅದರ ಜೀವ ತತ್ವವು ಮರಿಯಳ ಗರ್ಭಕೋಶಕ್ಕೆ ವರ್ಗಾಯಿಸಲ್ಪಟ್ಟು ಆಕೆಯ ಮೂಲಕ ಪವಿತ್ರವಾದ ಶಿಶುವೊಂದರ ಜನನವಾಯಿತು. ಆತನು ಸತ್ಯವೇದದಲ್ಲಿ ಹೇರಳವಾದ ಭರವಸದೊಂದಿಗೆ ಹೇಳಿರುವಂತೆ ಆತನು 'ಪವಿತ್ರನೂ, ನಿರುಪದ್ರವಿಯೂ, ನಿಷ್ಕಳಂಕನೂ, ಪಾಪಿಗಳಿಂದ ಪ್ರತ್ಯೇಕಿಸಲ್ಪಟ್ಟವನೂ' ಆಗಿದ್ದಾನೆ. ಈ ರೀತಿಯಲ್ಲಿ ಆತನು ನಮಗಾಗಿ ಅಥವಾ ನಮ್ಮ ಅಗತ್ಯತೆಗೆ ತಕ್ಕಂತೆ, ನ್ಯಾಯಕ್ಕೂ, ಈಡುಬಲಿಯ ಬೆಲೆಗೂ ತಕ್ಕಂತೆ ಉಂಟುಮಾಡಲ್ಪಟ್ಟನು. ನಂತರದಲ್ಲಿ ಆತನು ದೇವರಿಗೆ ಸಂಬಂಧಿಸಿದ ವಿಷಯಗಳಲ್ಲಿ ಮಾನವ ಜನಾಂಗದ ಮಹಾ ಯಾಜಕನಾಗಿ ಮಾಡಲ್ಪಟ್ಟು, ಬಲಹೀನರಿಗೆ ಮತ್ತು ಹೊರೆ ಹೊತ್ತವರಿಗೆ ಅನುಕಂಪವನ್ನು ತೋರಿಸುವವನಾಗಿ, ನಮ್ಮ ಅಪರಾಧಗಳನ್ನು ತನ್ನ ಮೇಲೆ ಹಾಕಿಕೊಂಡು ಮಾನವ ದೌರ್ಬಲ್ಯಗಳನ್ನು ಸ್ವತಃ ತಿಳುಕೊಂಡವನಾಗಿದ್ದಾನೆ – ಮತ್ತಾಯ 8:16, 17, ಇಬ್ರಿಯ 7:26.

ನಾವೀಗ ಆತನು ಪಾಪವಿಲ್ಲದವನಾಗಿದ್ದರೂ ಯಾವ ರೀತಿಯಲ್ಲಿ 'ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನವಾಗಬೇಕಾಗಿ ಬಂತು' ಎಂಬುದನ್ನು ಪರಿಗಣಿಸಲು ಹೋಗುವವರಾಗಿದ್ದೇವೆ.

* * * * * *